



ಜಾನಿಕ್ ಸಿನ್ನರ್ ಮತ್ತು ಕಾರ್ಲೋಸ್ ಅಲ್ಕರಾಜ್

# ಅಲ್ಕರಾಜ್–ಸಿನ್ನರ್ ಟೆನಿಸ್ ಲೋಕದ ದಳಪತಿಗಳು

**ಆಧುನಿಕ ಟೆನಿಸ್ ಜಗತ್ತಿನ ತ್ರಿವಳಿಗಳಾದ ರೋಜರ್ ಫೆಡರರ್, ರಫೆಲ್ ನಡಾಲ್ ಮತ್ತು ನೊವಾಕ್ ಜೊಕೊವಿಚ್ ಪೈಕಿ ಜೊಕೊವಿಚ್ ಗಾಯ, ನೋವು, ಬಳಲಿಕೆಯ ಸಮಸ್ಯೆಗಳನ್ನು ಉಳಿಸಿಕೊಂಡೇ ದಾಖಲೆಯ 25ನೇ 'ಮೇಜರ್' ಪ್ರಶಸ್ತಿ ಮೇಲೆ ಕಣ್ಣಿಟ್ಟು ಸ್ಪರ್ಧಾಕಣದಲ್ಲಿ ಉಳಿದಿದ್ದಾರೆ. ಅವರ ಕನಸಿಗೆ ಅಡ್ಡಿಯಾಗಿರುವವರು ಕಾರ್ಲೋಸ್ ಅಲ್ಕರಾಜ್ ಮತ್ತು ಜಾನಿಕ್ ಸಿನ್ನರ್. ಇವರಿಬ್ಬರ ಪ್ರಭಾವಳಿಯ ಸವಾಲು ಮೀರಿ ಟೆನಿಸ್ ಲೋಕದ ಅಧಿಪತಿಯಾಗಲು ಜೊಕೊವಿಚ್‌ಗೆ ಅವಕಾಶ ಸಿಗುವುದೇ...?**

■ **ವಿಕ್ರಂ ಕಾಂತಿಕೆರೆ**

ವರ್ಷಾಂತ್ಯದಲ್ಲಿ ನಡೆಯಲಿರುವ ಯುನೈಟೆಡ್ ಕಪ್ ಟೂರ್ನಿಯೊಂದಿಗೆ ಈ ಋತುವಿನ ಎಟಿಪಿ ಟೆನಿಸ್ ಟೂರ್ನಿಗಳಿಗೆ ತೆರೆ ಬೀಳಲಿದೆ. ಐದು ಟೂರ್ನಿಗಳು ಉಳಿದಿರುವಾಗಲೇ ಟೆನಿಸ್ ಜಗತ್ತು ರ್‍ಯಾಂಕಿಂಗ್ ಮತ್ತು ಸಾಧನೆಗಳ ಮೆಲುಕು ಹಾಕಲು ಆರಂಭಿಸಿದೆ. ಪುರುಷರ ವಿಭಾಗದಲ್ಲಿ ವರ್ಷದ ಟೆನಿಸ್‌ಪಟು ಯಾರೆಂಬ ಪ್ರಶ್ನೆಗೆ ಸ್ಪಷ್ಟವಾದ ಉತ್ತರ ಸಿದ್ಧವಾಗಿದೆ: ಜಾನಿಕ್ ಸಿನ್ನರ್ ಮತ್ತು ಕಾರ್ಲೋಸ್ ಅಲ್ಕರಾಜ್.

ಇತ್ತೀಚಿನ ವರ್ಷಗಳಲ್ಲಿ ಟೆನಿಸ್ ಅಂಗಳದಲ್ಲಿ ಮೆರೆದ ತ್ರಿವಳಿಗಳ ಪೈಕಿ ಮಣ್ಣಿನಂಕಣದ ರಾಜ ರಫೆಲ್ ನಡಾಲ್ ಮತ್ತು ಭಾವುಕ ರೋಜರ್ ಫೆಡರರ್ ತೆರೆಮರೆಗೆ ಸರಿದ ನಂತರ ಏಕಾಧಿಪತ್ಯ ಸ್ಥಾಪಿಸಿದ್ದ ಸರ್ಬಿಯಾದ ನೊವಾಕ್ ಜೊಕೊವಿಚ್ ನವೆಂಬರ್ ಮೊದಲ ವಾರ ಅಥೆನ್ಸ್‌ನಲ್ಲಿ ನಡೆದ ಹೆಲೆನಿಕ್ ಚಾಂಪಿಯನ್‌ಷಿಪ್‌ನಲ್ಲಿ ಇಟಲಿಯ ಲೊರೆನ್ಜೊ ಮುಸೆಟಿ ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದು 'ವರ್ಷದ ಆಟ' ಮುಗಿಸುವುದರೊಂದಿಗೆ ಅಪೂರ್ವ ದಾಖಲೆಯೊಂದರ ಒಡೆಯರಾದರು. ಆದರೂ ಸಿನ್ನರ್ ಮತ್ತು ಅಲ್ಕರಾಜ್ ವಾರ್ಷಿಕ ಕ್ಯಾಲೆಂಡರ್‌ನಲ್ಲಿ ಮೂಡಿಸಿರುವ ಛಾಪು ಅಳಿಸಲು ಸಾಧ್ಯವಾಗಲಿಲ್ಲ. ಈ ವರ್ಷದ 4 'ಮೇಜರ್'ಗಳಲ್ಲಿ ತಲಾ ಎರಡನ್ನು ಗೆದ್ದುಕೊಂಡಿರುವ ಸಿನ್ನರ್ ಮತ್ತು ಅಲ್ಕರಾಜ್ ಒಂದು ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಕೂಡ ಜೊಕೊವಿಚ್ ಪಾಲಾಗದಂತೆ ಪ್ರತಿರೋಧ ಒಡ್ಡಿದ್ದರು. ಆಡಿದ ಎಟಿಪಿ ಪಂದ್ಯಗಳಲ್ಲಿ ಇಬ್ಬರೂ ತಲಾ 1651 ಪಾಯಿಂಟ್‌ಗಳನ್ನು ಗೆದ್ದುಕೊಂಡು ಸಮಾನ ಬಲ ಪ್ರದರ್ಶಿಸಿದ್ದಾರೆ.

ನಾಲ್ಕೂ ಗ್ರ್ಯಾನ್‌ಸ್ಲಾಂಗಳಲ್ಲಿ ಅಂತಿಮ ನಾಲ್ಕರ ಘಟ್ಟದಲ್ಲಿ ಮುಗ್ಗರಿಸಿದ್ದ ಜೊಕೊವಿಚ್ ಆಡಿದ ಒಟ್ಟು 12 ಎಟಿಪಿ ಟೂರ್ನಿಗಳ ಪೈಕಿ ಎರಡರಲ್ಲಿ